# ಪ್ರಧಾನ ನ್ಯಾಯಿಕ ದಂಡಾಧಿಕಾರಿ ಮತ್ತು ಜೆ.ಎಂ.ಎಫ್.ಸಿ.
# ನ್ಯಾಯಾಲಯ ಮಾಗಡಿ

## ಕ್ರಿಮಿನಲ್ ಪ್ರಕರಣ ಸಂಖ್ಯೆ : 17 /2016

**ಚಾಸಾ :- 09 / ಪ್ರಾಸಾ :- 07**

| | |
|---|---|
| ಹೆಸರು | ಶಿವಕುಮಾರ್ |
| ತಂದೆ ಹೆಸರು | ನರಸಿಂಹಮೂರ್ತಿ |
| ವಯಸ್ಸು | 44 |
| ಉದ್ಯೋಗ | ಖಾಸಗಿ ಕೆಲಸ |
| ವಿಳಾಸ | ಲಕ್ಷ್ಮೀ ಪುರ , ಬೆಂಗಳೂರು |

**ದಿನಾಂಕ: 04.10.2024 ರಂದು** ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ :- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ :-**

ಈ ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇರುವುದಿಲ್ಲ ಹಾಗೂ ನನ್ನ ಸಮಕ್ಷಮ ಯಾವುದೇ ವಸ್ತುಗಳನ್ನು ಜಪ್ತಿ ಪಡಿಸಿಕೊಂಡಿರುವುದಿಲ್ಲ. ಈಗ ಸಾಕ್ಷಿಗೆ ನಿಪಿ-6 ಅನ್ನು ತೋರಿಸಲಾಗಿ ಅದರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಸಾಕ್ಷಿಯ ಸಹಿಯನ್ನು ನಿಪಿ-6(ಬಿ) ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ಪೋಲಿಸರು ಕೋರಿಕೆಯ ಮೇರೆಗೆ ಮಾಡಿರುತ್ತೇನೆ.

**ಈ ಹಂತದಲ್ಲಿ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರು ಸಾಕ್ಷಿಯು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರ ಮಖವಿಯನ್ನು ಪುರಸ್ಕರಿಸಿ, ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.**

**ಪಾಟೀ ಸವಾಲು :- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ :-**

ದಿನಾಂಕ 26.05.2013 ರಂದು ನನ್ನ ಮತ್ತು ಚಾಸಾ-8 ರವರ ಸಮಕ್ಷಮ ಶ್ರೀ ಮಾರುತಿ ಸೈಬರ್ ಸಂಟರ್ ಬಳಿ 5 ಕಂಪ್ಯೂಟರ್ ಗಳ ಸಿಪಿಯು ಗಳನ್ನು ಪರಿಶೀಲಿಸಲಾಗಿ 4 ಸೂಪರ್ ಕಂಪ್ಯೂಟರ್ ಕಂಪನಿಗಳ ಮತ್ತು ಬ್ರೊನಿಕ್ ಕಂಪನಿಯ ಒಂದು ಸಿಪಿಯು, 5 ಹಾರ್ಡ್ ಡಿಸ್ಕ ಗಳನ್ನು ಅಮಾನತು ಪಡಿಸಿಕೊಂಡು ಬಿಳಿ ಬಟ್ಟೆ ಚೀಲದಲ್ಲಿ ಹಾಕಿ ಬಿ ಎಂಬ ಅಕ್ಷರದಿಂದ ಸೀಲ್ ಮಾಡಿ ಅಮಾನತು ಪಡಿಸಿಕೊಂಡಿರುತ್ತಾರೆ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಸೂಪರ್ ಕಂಪ್ಯೂಟರ್ ಗಳ ಪೈಕಿ 1 ನೇಯದನ್ನು ತೆರೆದು ಅದರಲ್ಲಿನ ಹಾರ್ಡ್ ಡಿಸ್ಕ ನ್ನು ತೆಗೆದು ಪರಿಶೀಲಿಸಲಾಗಿ ಸ್ಯಾಂಸಂಗ್ ಕಂಪನಿಯದ್ದು ಆಗಿದ್ದು ಅದರ ನಂಬರ್ SP2504N ಅಂಥ ಇದ್ದು ನಂಬರ್ P/N 141611FL 864904 ಎಂದು ನಮೂದಿಸಿದೆ ಎಂದರೆ ಸಾಕ್ಷಿ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ. 2 ನೇ ಸಿಪಿಯು ಬಾಕ್ಸ್ ಅನ್ನು ತೆಗೆದು ನೋಡಲಾಗಿ ಅದರಲ್ಲಿ Samsung company hard disk ಇದ್ದು SP2504N No.P/N141611FL003475 ಎಂದು ನಮೂದಿಸಿದೆ ಎಂದರೆ ಸಾಕ್ಷಿ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ.

3 ನೇ ಸಿಪಿಯು Gibronic ಕಂಪನಿಯದ್ದಾಗಿದ್ದು ಅದರ ಮಾಡೆಲ್ ನಂಬರ್ ST1000BM003 ಆಗಿದ್ದು SEAGATE ಆಗಿರುತ್ತದೆ ಎಂದರೆ ಸಾಕ್ಷಿ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ.

4 ನೇ ಸಿಪಿಯು ಬಾಕ್ಸ್ ಅನ್ನು ತೆಗೆದು ನೋಡಲಾಗಿ ಅದರಲ್ಲಿ Super company ಯದಾಗಿದ್ದು hard disk Samsung company ಯದ್ದಾಗಿದ್ದು ಅದರ ಮೇಲೆ P/N141611FL777118 ಎಂದು ನಮೂದಿಸಿದೆ ಎಂದರೆ ಸಾಕ್ಷಿ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ.

5 ನೇ ಸಿಪಿಯು ಬಾಕ್ಸ್ ಅನ್ನು ತೆಗೆದು ನೋಡಲಾಗಿ ಅದರಲ್ಲಿ Super company ಯದಾಗಿದ್ದು hard disk Samsung company ಯದ್ದಾಗಿದ್ದು ಅದರ ಮೇಲೆ P/N302211CQ201648 ಎಂದು ನಮೂದಿಸಿದೆ ಎಂದರೆ ಸಾಕ್ಷಿ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ.

5 ಕಂಪ್ಯೂಟರ್ ಗಳ ಸಿಪಿಯಗಳನ್ನು ಮಾತ್ರ ಅಮಾನತು ಪಡಿಸಿಕೊಂಡು ಅವುಗಳಲ್ಲಿ ತಲಾ 1 ರಂತೆ 5 ಹಾರ್ಡ ಡಿಸ್ಕ ಗಳು ಇದ್ದು ಅವುಗಳನ್ನು ಅಮಾನತು ಪಡಿಸಿಕೊಂಡಿರುತ್ತಾರೆ ಎಂದರೆ ಸಾಕ್ಷಿ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ಸದರಿ ಅಮಾನತು ಪಂಚನಾಮೆಯನ್ನು ಸಂಜೆ 5.00 ರಿಂದ 6.00 ಗಂಟೆಯವರೆಗೆ ಜರುಗಿರುತ್ತಾರೆ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಈ ಪ್ರಕಣದ ಬಗ್ಗೆ ಎಲ್ಲಾ ಮಾಹಿತಿ ಇದ್ದರೂ ಆರೋಪಿಗಳಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ.

**ಪಾಟೀ ಸವಾಲು ಃ-**

ಆರೋಪಿ ಪರ ವಕೀಲರು ಪಾಟೀಸವಾಲುಇರುವುದಿಲ್ಲ ಎಂದು ಹೇಳಿರುತ್ತಾರೆ.

**ಮರು ವಿಚಾರಣೆ ಇರುವುದಿಲ್ಲ.**

**ಓ. ಹೇ. ಕೇ. ಸ. ಇ. ಎ. ಓಪ್ಪಿರುತ್ತಾರೆ,**

**ಪ್ರ. ನ್ಯಾ. ದಂ. ಮತ್ತು ಜೆ. ಎಂ. ಎಫ್?ಸಿ. ಮಾಗಡಿ.**